**ಇಂದು ದಿನಾಂಕ:** 30.01.2026 **ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ವಕೀಲರಿಂದಃ**

ದಾವೆಯ ಬಗ್ಗೆ ಸಂಪೂರ್ಣ ವಿದ್ಯಮಾನಗಳನ್ನು ತಿಳಿದುಕೊಂಡಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿ ಏನೆಂದು ಕೇಸು ಹಾಕಿದ್ದಾರೆ ಗೊತ್ತಿಲ್ಲ. ಸ.ನಂ.41 ಕ್ಕೆ ವಾದಿ ಕೇಸು ಹಾಕಿದ್ದಾರೆ. ಆ ಸರ್ವೆ ನಂಬರ್ ಒಟ್ಟು 7 ಎಕರೆ 11 ಗುಂಟೆ ಇದೆ. ಅದಕ್ಕೆ ಚೆಕ್ಕುಬಂಧಿ ಪೂರ್ವಕ್ಕೆ ಮಂಡಿಗೌಡರ ಜಮೀನು, ಪಶ್ಚಿಮಕ್ಕೆ ಮಲ್ಲೇಶರವರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ ಮತ್ತು ದಕ್ಷಿಣಕ್ಕೆ ಬೆಟ್ಟೇಗೌಡರ ಜಮೀನು. ಈಗ ಹೇಳಿದ ಚೆಕ್ಕುಬಂಧಿ ಪೈಕಿ 4 ಎಕರೆ ಕೃಷ್ಣೇಗೌಡರು ಉಳುಮೆ ಮಾಡುತ್ತಿದ್ದಾರೆ, ಉಳಿದ ವಿಸ್ತೀರ್ಣದಲ್ಲಿ ವಾದಿ ಉಳುಮೆ ಮಾಡುತ್ತಿದ್ದಾರೆ.

ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನವಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿ ಪೈಕಿ ಕೃಷ್ಣೇಗೌಡರು ಉಳುಮೆ ಮಾಡುತ್ತಿರುವ ಪೂರ್ವಕ್ಕೆ ಮಂಡಿಗೌಡರ ಜಮೀನು, ಪಶ್ಚಿಮಕ್ಕೆ ಮಲ್ಲೇಶರವರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ ಮತ್ತು ದಕ್ಷಿಣಕ್ಕೆ ಬೆಟ್ಟೇಗೌಡರ ಜಮೀನು. ಈಗ ಹೇಳಿದ ಚೆಕ್ಕುಬಂಧಿಯನ್ನು ಪ್ರತಿವಾದಿಗಳು ಹೇಳಿಲ್ಲ ನನಗೆ ಗೊತ್ತಿತ್ತು. ದಾವಾ ಆಸ್ತಿಯ ಪಕ್ಕದಲ್ಲಿ ನನಗೆ ಜಮೀನು ಇರುವುದಿಲ್ಲ. ಸುಳ್ಳು ಚೆಕ್ಕುಬಂಧಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಮೂಲ ದಾಖಲೆ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಸಂಬಂಧ ಅಸಲು ದಾವಾ ನಂಬರ್ 93/2000 ಹಾಗೂ 175/2021 ರಲ್ಲಿ ವಾಜ್ಯ ನಡೆದಿರುವುದು ಗೊತ್ತಿಲ್ಲ. ಪ್ರತಿವಾದಿಗಳ ತಂದೆ ರಾಜನಬಿಳಗುಳಿಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ ಆನೆಹಳ್ಳುವಿನಲ್ಲಿ ವಾಸವಿದ್ದಾರೆ. ದಾವಾ ಆಸ್ತಿ ರೇಣುಕಮ್ಮನವರಿಗೆ ಯಾವ ದಾಖಲೆಯ

ಮೇರೆಗೆ ಬಂದಿದೆ ಎಂದರೆ ಮಂಡೀಗೌಡರು ಬರೆದುಕೊಟ್ಟಿರುವುದರಿಂದ ಬಂದಿದೆ. ಅದು ಯಾವ ರೀತಿ ಪತ್ರ ಎಂದು ಗೊತ್ತಿಲ್ಲ. ದಾವಾ ಆಸ್ತಿ ವಾದಿಗೆ ದಿನಾಂಕ 12.04.1951 ರ ನೊಂದಣಿ ದತ್ತು ಪತ್ರದ ಮೂಲಕ ಬಂದಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗೆ ವಾದಿಗೆ ಸ್ವಯಾರ್ಜಿತ ಆಸ್ತಿ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ವಾದಿಯೇ ಸ್ವಾಧೀನವಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲದಿದ್ದರೂ ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**